ನನ್ನ ಮಾತಿನ ಪರಿಣಾಮ ಆಗುತ್ತಿಲ್ಲ, ಇದಕ್ಕಾಗಿ ಶಿಕ್ಷೆ ನನಗೇ ಆಗಬೇಕು' ಎಂದು ಹೇಳಿದರಂತೆ. ಈವರೆಗೆ ಕುರ್ಚಿಯಲ್ಲಿ ಕುಳಿತು ಕಲಿಸುತ್ತಿದ್ದ ಅವರು ಅಂದಿನಿಂದ ನಿಂತುಕೊಂಡೇ ಕಲಿಸತೊಡಗಿದರಂತೆ; ಆ ನಂತರ ವಿದ್ಯಾರ್ಥಿಗಳಿಗೆ ತಿಳಿದದ್ದು, ದೋಷ ಪರಿಮಾರ್ಜನೆಗಾಗಿ ಸಾಲಿಯವರು ಮನೆಯಲ್ಲಿ ಉಪವಾಸ ಸಹ ಮಾಡಿದ್ದರಂತೆ. ಸಾಲಿ ಅವರು ತಮ್ಮ ವಿದ್ಯಾರ್ಥಿಗಳು ಮಾಡಿದ ತಪ್ಪಿಗಾಗಿ, ತಾವು ಉಪವಾಸ ಮಾಡಿದ್ದುದನ್ನು, 02.02.1942ರಂದು ತಮ್ಮ ಡೈರಿಯಲ್ಲಿ ಬರೆದಿದ್ದಾರೆ. ನೈತಿಕತೆ ಮತ್ತು ಸೂಕ್ಷ್ಮತೆಗಳಿಗೆ ಬೆಲೆ ಕೊಡುತ್ತಿದ್ದ ಸಾಲಿ ಅವರು ಈ ಪ್ರಸಂಗದ ಬಗ್ಗೆ ಬರೆದದ್ದು ಇಲ್ಲಿದೆ. (ಅವತ್ತಿನ ಕ್ಲಾಸಿನಲ್ಲಿ ವಿದ್ಯಾರ್ಥಿಯಾಗಿದ್ದ, ನನ್ನ ಗೆಳೆಯ ನಾಗೇಶ ರಾಣೆ ಅವರಿಂದ ನನಗೆ ಈ ಸಂಗತಿ ತಿಳಿದಿತ್ತು.)

ಈ ಡೈರಿಯನ್ನು ಓದುತ್ತಿದ್ದಂತೆ ಸಾಲಿಯವರ ಪವಿತ್ರ ಜೀವನ, ಪ್ರಾಮಾಣಿಕತೆ, ಕರ್ತವ್ಯಬುದ್ಧಿ, ಸಮಕಾಲೀನ ಪ್ರತಿಷ್ಠಿತರು, ಸಹೋದ್ಯೋಗಿ ಶಿಕ್ಷಕರು, ವಿದ್ಯಾರ್ಥಿಗಳು, ಸಾರ್ವಜನಿಕ ಕಲಾಪ್ರಿಯರು, ಸಾಂಸ್ಕೃತಿಕ ಬದುಕು, ಆ ಕಾಲದಲ್ಲಿಯೂ ಹೊಗೆಯಾಡುತ್ತಿದ್ದ ಜಾತಿವೈಷಮ್ಯ, ಸಾಲಿಯವರ ಆತ್ಮಸಂಬೋಧನೆ ಮುಂತಾದ ವಿವರಗಳು ತಿಳಿಯುತ್ತವೆ. ತಮ್ಮ ಮನೆಯನ್ನು ಕಟ್ಟುವ ಗುತ್ತಿಗೆ (ಕಾಂಟ್ರಾಕ್ಟ್) ಹಿಡಿದಿದ್ದ ವ್ಯಕ್ತಿಯಿಂದ ಸಾಲಿಯವರು ಪಟ್ಟ ಪಡಿಪಾಟಲು ಕಣ್ಣಿಗೆ ಕಟ್ಟುವಂತೆ ನಮೂದಾಗಿದೆ. ಸಾಲಿಯವರ ಬದುಕು ಒಂದು ಪ್ರಶಾಂತ ಮಂದಿರದಲ್ಲಿ ಕುಳಿತು ಧ್ಯಾನ ಮಾಡಿದ ಹಾಗೆ. ಆ ಮಂದಿರದಲ್ಲಿ ದೊರೆಯುವ ಶಾಂತಿ, ನೆಮ್ಮದಿ ಅಲ್ಲಿಗೆ ಬರುವ ಭಕ್ತರ ಮನಃಸ್ಥಿತಿ, ಪರಿಸ್ಥಿತಿಗಳನ್ನು ಅವಲಂಬಿಸಿರುತ್ತದೆ; ಓದುಗರು ಸಾಲಿಮಂದಿರವನ್ನು ಹಾಗೆಯೇ ಪ್ರವೇಶಿಸಬೇಕು. ಸಂಪೂರ್ಣ ಸಮರ್ಪಿತ ಶ್ರೀಹರಿಭಕ್ತಿ; ವಿವೇಕ, ಶೀಲಮಯ ಪ್ರಾಮಾಣಿಕ ಸಮಾಜಪ್ರೇಮ, ಜಾತ್ಯಂಧತೆಯ ವಿರೋಧ, ಮಾನವೀಯತೆಯ ಕಳಕಳಿ; ಗಾಂಧೀಭಕ್ತಿ, ಸತ್ಯದ ಆರಾಧನೆ, ಗಾಂಧೀಪ್ರಣೀತ ಸತ್ಯಾಗ್ರಹದ ಬಗ್ಗೆ ಅಪಾರ ನಿಷ್ಠೆಗಳ ತ್ರಿವೇಣಿಸಂಗಮವನ್ನು ಅವರ ಡೈರಿಯಲ್ಲಿ ಪುಟಪುಟದಲ್ಲಿ ಅನುಭವಿಸಬಹುದು. ಪ್ರತಿ ದಿನವೂ ಮಲಗುವ ಮುನ್ನ ಸದ್ವಿಚಾರಗಳನ್ನು ಚಿಂತಿಸಿದ್ದಾರೆ, ಬರೆದಿದ್ದಾರೆ. ತಾಯ್ನುಡಿ, ತಾಯ್ನಾಡಿನ



ಸೀತಾಬಾಯಿ

ಅಭಿಮಾನ ಎಲ್ಲೆಡೆ ತುಳುಕುತ್ತಿದೆ. ಆಂಗ್ಲ ಪದಗಳನ್ನು ನಿರರ್ಗಳವಾಗಿ, ನಿರಾಯಾಸವಾಗಿ, ಸಹಜವಾಗಿ ಕನ್ನಡಿಸುವ ಪ್ರೇಮವಂತೂ ಈಗಿನವರನ್ನು ಬೆಚ್ಚಿ ಬೀಳಿಸುವಂತಿದೆ. 'ಪೆಟ್ರೋಮಕ್ಸ್', 'ಸನಿಟರಿ', 'ಅಮಚ್ಯೂರ್ಸ್', 'ಕಾಲೇಜು', 'ಫರನ್', 'ಬಾಂಬು' ಮುಂತಾದ ಪದಗಳನ್ನು ಬರೆಯುವಾಗ ಮೂಲದ ಉಚ್ಚಾರಕ್ಕೆ ಹತ್ತಿರ ಬರಲು ಯತ್ನಿಸಿದ ರೀತಿ, ಕನ್ನಡ ಕೋಶಕ್ಕೆ ಹೊಸ ಸೇರ್ಪಡೆಯನ್ನು ಸಂಕೇತಿಸುವಂತಿದೆ. ಅಲಕ್ಷಿಸಲಾಗದ ಇಲ್ಲಿಯ ಇಂಥ ಅನೇಕ ವಿವರಗಳನ್ನು ಕುರಿತು ನಾನು ಹೆಚ್ಚು ಹೇಳುವುದಿಲ್ಲ. ಸಾಲಿ ಅವರ ಎಲ್ಲ ಡೈರಿ ಪುಸ್ತಕಗಳು ಸಿಕ್ಕಿದ್ದರೆ ಅವರ ವೈಶಿಷ್ಟ್ಯಗಳ ಬಗೆಗೇ ಒಂದು ಮಹತ್ವಪೂರ್ಣ ಪುಸ್ತಕ ರಚಿಸಬಹುದಾಗಿತ್ತು.

* * *

ನನಗೆ ಸಿಕ್ಕಿರುವ ಡೈರಿಯ, ಚೊಕ್ಕ ಅಕ್ಷರಗಳಲ್ಲಿ ಬರೆಯಲ್ಪಟ್ಟ, ಮೂರು-ಮೂರೂವರೆ ತಿಂಗಳ ವಿವರಗಳಲ್ಲಿ, ಗಾಂಧೀಜಿಯ ಆತ್ಮಕಥೆಯಂಥ ಸ್ವಚ್ಛ, ನಿರ್ಮಲ, ನಿರ್ದುಷ್ಟ, ನೇರ ಬರವಣಿಗೆ ಇದೆ. ಅತ್ಯಂತ ನಿಯಮಿತವಾಗಿ, ಪ್ರಾಮಾಣಿಕವಾಗಿ ಬರೆದ ಈ ಡೈರಿಯಲ್ಲಿ ದೇವತಾತ್ಮಾ ಸ್ವರೂಪರಾದ ಇನ್ನೊಬ್ಬ ಗಾಂಧಿಯನ್ನೇ ಕಾಣಬಹುದು. ಬಹುಶಃ ಗಾಂಧೀಜಿಯ ಆತ್ಮಕಥೆಯನ್ನು ಕನ್ನಡಕ್ಕೆ (1933)